ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ

ದಿನಾಂಕ 11 ನೇ ಜುಲೈ 2024 ನೇ ಇಸವಿ

ಕ್ರಿಮಿನಲ್ ಮೊಕದ್ದಮೆ ಕ್ರಮಾಂಕಃ **11/2024**

ರಾಜ್ಯ ಸರ್ಕಾರದ ಪರವಾಗಿ,
ಪೋಲಿಸ್ ಉಪ ನಿರೀಕ್ಷಕರು,
ಅಜೆಕಾರು ಪೋಲಿಸ್ ಠಾಣೆ,
ಅಜೆಕಾರು ಉಡುಪಿ ಜಿಲ್ಲೆ. .... ಪಿರ್ಯಾದುದಾರರು.

- ವಿರುದ್ಧ -
-

1) ಸಯ್ಯದ್ ಮೊಹಮ್ಮದ್ ಬಶೀರ್
ಪ್ರಾಯಃ 37 ವರ್ಷ,
ತಂದೆಃ ಅಬ್ದುಲ್ ರೆಹಮಾನ್ ,
ವಾಸಃ ಮೊಟ್ಟೆತಡ್ಕ ಹೌಸ್
ಇಂದಿರಾನಗರ , ದರ್ಬೆ ,
ಪುತ್ತೂರು ತಾಲೂಕು .
ದಕ್ಷಿಣ ಕನ್ನಡ ಜಿಲ್ಲೆ

2. ಉಮ್ಮರ್ ಫರೂಕ್,
ಪ್ರಾಯ 36 ವರ್ಷ,
ತಂದೆಃ ಪಳ್ಳಿಯಬ್ಬ ,
ವಾಸಃ ಕಲ್ಲಸರ್ಪೆ ಹೌಸ್ ,
ಕೆದಿಲ ಅಂಚೆ ಮತ್ತು ಗ್ರಾಮ ,
ಮಿತ್ತೂರು , ಬಂಟ್ವಾಳ ತಾಲೂಕು .
ದಕ್ಷಿಣ ಕನ್ನಡ ಜಿಲ್ಲೆ .

3. ಅಬ್ದುಲ್ ಲತೀಫ್ ,
ಪ್ರಾಯ 39 ವರ್ಷ,
ತಂದೆ ಅಬ್ದುಲ್ ಖಾದರ್ ,
ಹಾಲಿ ವಾಸಃ ಮನೆ ನಂ . 2-168 ,
ಸೂರ್ಯ ಹೌಸ್,
ಇಡ್ಕಿದು ಗ್ರಾಮ, ಬಂಟ್ವಾಳ ತಾಲೂಕು,
ದಕ್ಷಿಣ ಕನ್ನಡ ಜಿಲ್ಲೆ
ಖಾಯಂ ವಾಸಃ ನೆಲ್ಲಿಗುಡ್ಡೆ ಹೌಸ್ ,
ಬಂಟ್ವಾಳ ತಾಲೂಕು ,
ದಕ್ಷಿಣ ಕನ್ನಡ ಜಿಲ್ಲೆ . ... ಆರೋಪಿಗಳು .

<u>ದೋಷಾರೋಪಣೆ</u>

ಶ್ರೀಮತಿ ಶರ್ಮಿಳಾ ಸಿ ಎಸ್., ಬಿ.ಎ.ಎಲ್., ಎಲ್‌ಎಲ್.ಎಂ ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಮೇಲ್ಕಂಡ ನಿಮ್ಮನ್ನು ಕೆಳಕಂಡಂತೆ ದೋಷಾರೋಪಿಸುತ್ತೇನೆ.

ದಿಃ **14/10/2020** ರಂದು ರಾತ್ರಿ 2.00 ಗಂಟೆಗೆ 1 ಮತ್ತು 2 ನೇ ಆರೋಪಿಗಳಾದ ನೀವು ಕಾರ್ಕಳ ತಾಲೂಕಿನ ಮರ್ಣೆ ಗ್ರಾಮದ ಮಂಗಳನಗರ ಎಂಬಲ್ಲಿರುವ ಸೌತ್ ಇಂಡಿಯಾ ಕ್ಯಾಶ್ಯೂ ಫ್ಯಾಕ್ಟರಿಯ ಒಳಗೆ ಹೊಂಚು ಹಾಕಿ ರಾತ್ರಿಯಲ್ಲಿ ಗೃಹಾತಿಕ್ರಮಣ ಮಾಡಿದ್ದು , ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 457 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೇಯದಾಗಿ, 1 ಮತ್ತು 2 ನೇ ಆರೋಪಿಗಳಾದ ನೀವು ಮೇಲೆ ಹೇಳಿದ ದಿನ, ಸಮಯ, ಸ್ಥಳದಲ್ಲಿ, ಮೇಲೆ ಹೇಳಿದಂತೆ ಕೃತ್ಯ ಎಸಗಿದ್ದಲ್ಲದೇ, ಫ್ಯಾಕ್ಟರಿಯ ಶಟರ್ ಅವನ್ನು ಜಾಕ್‌ನ ಸಹಾಯದಿಂದ ಎತ್ತಿ , ಸುಮಾರು 75,000 ರೂ. ಮೌಲ್ಯದ 125 ಕೆ ಜಿ ತೂಕದ ಗೇರುಬೀಜದ ತಿರುಳನ್ನು ಕಳವು ಮಾಡಿ ನಿಮ್ಮಲ್ಲಿ 3 ನೇ ಆರೋಪಿ ಯವರೊಂದಿಗೆ ಸೇರಿ ಮಾರಾಟ ಮಾಡಿದ್ದು , ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 380 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಆರೋಪಿಗಳಿಗೆ ಮೇಲಿನ ದೋಷಾರೋಪಣೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ. )

(ಶರ್ಮಿಳಾ ಬಿ ಎಸ್ )
ಪ್ರ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ.,
ಕಾರ್ಕಳ.